**ದಿಃ 15-03-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿ ವಿಚಾರಣೆಗೆ ಒಳಪಡಿಸಲಾಯಿತು.**

**ಪಾಟೀ ಸವಾಲುಃ ಎದುರುದಾರ ಪರ ಶ್ರೀಮತಿ ಆರ್.ಎಂ.ಸಿ . ವಕೀಲರಿಂದಃ**

ಒಂದು ವರ್ಷ ತಡವಾಗಿ ನೀವು ಅರ್ಜಿ ಸಲ್ಲಿಸಿದ್ದು ಮುಂಚೆಯೇ ಅರ್ಜಿ ಸಲ್ಲಿಸಲು ನಿಮಗೆ ಯಾವುದೇ ತೊಂದರೆ ಇರಲಿಲ್ಲ ಎಂದು ಕೇಳಲಾಗಿ ಸಾಕ್ಷಿಯು ನಮಗೆ ಕಾನೂನಿನ ಬಗ್ಗೆ ತಿಳುವಳಿಕೆ ಇರಲಿಲ್ಲ ಎಂದು ನುಡಿಯುತ್ತಾರೆ . ಮೃತ ದಿನೇಶ ತಂದೆ ಸಿದ್ದಾಯಿ ಮುಚ್ಚಂಡಿ ಇವರಿಗೆ ಅಪಘಾತ ಪಡಿಸಿದ ವಾಹನದ ಚಾಲಕ ಈವರೆಗೆ ಪತ್ತೆಯಾಗಿರುವುದಿಲ್ಲ ಎಂದರೆ ಸರಿ . ಮೃತ ದಿನೇಶ ತಂದೆ ಸಿದ್ದಾಯಿ ಮುಚ್ಚಂಡಿ ಇವರಿಗೆ ಅಪಘಾತ ಪಡಿಸಿದ ವಾಹನದ ಚಾಲಕ ಈವರೆಗೆ ಪತ್ತೆಯಾಗಿರದ ಕಾರಣ ಆತನ ವಿರುದ್ಧ ದೋಷಾರೋಪಣ ಪಟ್ಟಿ ಸಲ್ಲಿಸದೇ ಇದ್ದುದರಿಂದ ನಮಗೆ ಪ್ರಸ್ತುತ ಅರ್ಜಿ ಸಲ್ಲಿಸುವ ಪ್ರಮೇಯ ಉದ್ಭವಿಸುವುದಿಲ್ಲ ಎಂದರೆ ಸರಿಯಲ್ಲ. ಪ್ರಸ್ತುತ ಅರ್ಜಿಯನ್ನು ನಾವು ಉದ್ದೇಶ ಪೂರ್ವಕವಾಗಿ 1 ನೇ ಆರೋಪಿಯ ವಿರುದ್ಧ ಮಾತ್ರ ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ . ಯಾವುದೇ ಸ್ವಕಾರಣ ಇಲ್ಲದೇ ಪ್ರಸ್ತುತ ಅರ್ಜಿಯನ್ನು ತಡವಾಗಿ ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)**

**ಓ ಹೇ ಕೇ ಸ ಇ**

ಸಹಿ ಇದೆ.

**ಸಿನಿಯರ್ ಸಿವಿಲ್ ಜಡ್ಜ್ ಮತ್ತು**
**ಪ್ರ.ದ.ನ್ಯಾ.ದಂ. ಹಳಿಯಾಳ.**